ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲು 8 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಹೆಚ್.ಬಿ.ಎಸ್ ರವರಿಂದ:-</u>

ದಾವಾ ಅನುಸೂಚಿಯ 14 ನೇ ಐಟಂ ಸ್ವತ್ತು ಯಾವ ರೀತಿ ಬಂದಿದೆ ಎಂದರೆ ಸಾಕ್ಷಿಯು ಹಿರಿಕರ ಆಸ್ತಿ ಮಾರಿ ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ಹಿರಿಕರ ಯಾವ ಆಸ್ತಿ ಮಾರಾಟ ಮಾಡಿ ಈ ಸ್ವತ್ತನ್ನು ಖರೀದಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿಯ 14 ನೇ ಐಟಂ ಸ್ವತ್ತಿನ ಚಕ್ಕು ಬಂದಿ ನನಗೆ ಗೊತ್ತಿಲ್ಲ. ನಾನು ಈ ದಾವೆ ಯನ್ನು ಹಾಕುವಾಗ ನನ್ನ ತಂದೆ ಜೀವಂತವಾಗಿರಲಿಲ್ಲ. ನನ್ನ ತಂದೆ ತೀರಿಹೋಗಿ 14 ವರ್ಷಗಳಾಗಿವೆ. ಅವರ ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದೀರಾ ಎಂದರೇ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂದೇ ಜೀವಂತವಾಗಿರುವಾಗಲೇ ಎಲ್ಲಾ ಆಸ್ತಿಗಳನ್ನು ವಿಭಾಗ ಮಾಡಿದ್ದು ದಾವಾ ಅನುಸೂಚಿಯ 14 ನೇ ಐಟಂ ಸ್ವತ್ತು ನಮ್ಮ ಪಿತ್ರಾರ್ಜಿತ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿಯ 14 ನೇ ಐಟಂ ಸ್ವತ್ತು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವಾ ಅನುಸೂಚಿಯ 14 ನೇ ಐಟಂ ಸ್ವತ್ತು ನನ್ನ ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿದ್ದೇನಾ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿ: 06.02.2006 ರಲ್ಲಿ 2 ನೇ ಪ್ರತಿವಾದಿ ವಿ. ವೆಂಕಟೇಶ್ ರವರಿಂದ ದಾವಾ ಅನುಸೂಚಿಯ 14 ನೇ ಐಟಂ ಸ್ವತ್ತನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹಿರಿಕರ ಆಸ್ತಿ ಮಾರಾಟ ಮಾಡಿ ಬಂದ

ಮುಂಗಡ ಹಣದಲ್ಲಿ ಖರೀದಿಸಿದ್ದರು ಎಂದು ನುಡಿಯುತ್ತಾರೆ. ಹಿರಿಕರ ಯಾವ ಆಸ್ತಿ ಮಾರಾಟ ಮಾಡಿ ಈ ಅಸ್ತಿಯನ್ನು ಖರೀದಿಸಲಾಗಿತ್ತು ಎಂದು ನನಗೆ ಗೊತ್ತಿಲ್ಲ. ದಿಃ 18.07.2012 ರಂದು 2 ನೇ ಪ್ರತಿವಾದಿ ಸದರಿ ಸ್ವತ್ತನ್ನು ತನ್ನ ಪತ್ನಿ 7 ನೇ ಪ್ರತಿವಾದಿಗೆ ದಾನ ಪತ್ರದ ಮೂಲಕ ಕೊಟ್ಟಿದ್ದರು ಎಂದರೆ ಸಾಕ್ಷಿಯು ಈ ದಾವೆ ಹಾಕಿದ ನಂತರ ದಾನ ಪತ್ರ ಮಾಡಿದ್ದರು ಎಂದು ನುಡಿಯುತ್ತಾರೆ. ದಿಃ 29.10.2014 ರಂದು 2 ಮತ್ತು 7 ನೇ ಪ್ರತಿವಾದಿಗಳು ಸದರಿ ಸ್ವತ್ತನ್ನು 8 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸಾಕ್ಷಿಯು ಈ ದಾವೆ ಹಾಕಿದ ನಂತರ ಮಾರಾಟ ಮಾಡಿದ್ದರು ಎಂದು ನುಡಿಯುತ್ತಾರೆ. 8 ನೇ ಪ್ರತಿವಾದಿಗೆ ಈ ದಾವೆ ಹಾಕಿದ ವಿಚಾರ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿ ಆಸ್ತಿ ಖರೀದಿಸುವ ಸಂದರ್ಭದಲ್ಲಿ 2 ಮತ್ತು 7 ನೇ ಪ್ರತಿವಾದಿಗಳ ಹೆಸರಿನಲ್ಲಿದ್ದ ಕ್ರಯಪತ್ರ ಖಾತೆ ಪಹಣಿ ದಾಖಲೆಗಳನ್ನು ನೋಡಿ ಆಸ್ತಿ ಖರೀದಿಸಿದ್ದರು ಎಂದರೆ ಸರಿಯಲ್ಲ. 8 ನೇ ಪ್ರತಿವಾದಿ ಆಸ್ತಿ ಖರೀದಿಸಿದ ನಂತರ ಅಲ್ಲಿ ಮನೆ ಕಟ್ಟಿ ವಾಸ ಇದ್ದು ಆಸ್ತಿಗೆ ಬಹಳಷ್ಟು ಹಣ ವಿನಿಯೋಗಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ತನ್ನ ಸ್ವಂತ ಹಣದಿಂದ ದಾವಾ ಅನುಸೂಚಿಯ 14 ನೇ ಐಟಂ ಸ್ವತ್ತನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಜೀವಿತ ಕಾಲದಲ್ಲಿ ಎಲ್ಲಾ ಆಸ್ತಿಗಳನ್ನು ಮಕ್ಕಳಿಗೆ ಭಾಗ ಮಾಡಿಕೊಟ್ಟು ಹಣ ಕೊಟ್ಟು ನನಗೂ ಭಾಗ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ಇತ್ತೀಚಿಗೆ ಆಸ್ತಿ ಬೆಲೆ ಜಾಸ್ತಿಯಾದ ಕಾರಣ ನಾನು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 8 ನೇ ಪ್ರತಿವಾದಿ ಆಸ್ತಿಗೆ ಸರಿಯಾದ

ಬೆಲೆಯನ್ನು ಕೊಟ್ಟು **2** ಮತ್ತು **7** ನೇ ಪ್ರತಿವಾದಿಗಳಿಂದ ಆಸ್ತಿ ಖರೀದಿಸಿದ್ದಾರೆ ಎಂದರೆ ಸಾಕ್ಷಿಯು ನಾನು ದಾವೆ ಹಾಕಿದ ನಂತರ ಆಸ್ತಿ ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ. **8** ನೇ ಪ್ರತಿವಾದಿ ಆಸ್ತಿಯನ್ನು ಖರೀದಿಸಿ ನೊಂದಣಿ ಮಾಡಿಸಿಕೊಂಡ ನಂತರ ನಾನು ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೆ ಎಂದರೆ ಸರಿಯಲ್ಲ.

ನನಗೆ ಮದುವೆಯಾಗಿ **41** ವರ್ಷಗಳಾಗಿವೆ. **8** ನೇ ಪ್ರತಿವಾದಿಗೆ ತೊಂದರೆ ಕೊಡಲು ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಅನುಪಮ ಲಕ್ಷ್ಮಿ.ಬಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ್.ಎಫ್.ಸಿ.,
ರಾಮನಗರ.